**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

ಸಿ.ಸಿ.ನಂಃ **1709/2018**

ಸಿಡಬ್ಲೂಃ **6**

ಪಿ.ಡಬ್ಲೂಃ **1**

| | | |
|---|---|---|
| ಸಾಕ್ಷಿಯ ಹೆಸರು | : | ರವಿಚಂದ್ರ ಪರಶುರಾಮ ಗೌಡರ |
| ವಯಸ್ಸು | : | **42** ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಖಾನಾಪುರ |

ದಿನಾಂಕಃ **16-10-2023**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ವಕೀಲರಿಂದಃ-**

ಆರೋಪಿ ನನಗೆ ಪರಿಚಯ ಇರುವುದಿಲ್ಲ. ಚಾಸಾ 3, 5, 7 ಹಾಗೂ 8 ರವರು ಪರಿಚಯ ಇರುವುದಿಲ್ಲ. ಚಾಸಾ 1, 4 ರವರ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರ ವಿರುದ್ಧ ಏಕೆ ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸರ್ಕಾರಿ ವಕೀಲರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ವಕೀಲರಿಂದಃ-**

ನನ್ನ ಖುದ್ದು ಊರು ಗಸ್ಟೊಳ್ಳಿ ಎಂದರೆ ಸರಿ. 2018 ರಲ್ಲಿ ನಾನು ಬೀಡಿ ಗ್ರಾಮದಲ್ಲಿ ಎಲ್ಲ ಓಣಿಗಳಲ್ಲಿ ತಿರುಗಾಡಿ ಪಿಗ್ಮಿ ಕಲೆಕ್ಟ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು 2004 ರಲ್ಲಿ ಬೀಡಿ ಗ್ರಾಮದಲ್ಲಿ ಪಿಗ್ಮಿ ಕಲೆಕ್ಟ ಮಾಡುತ್ತಿದ್ದೆ, ನಂತರ ಬಿಟ್ಟಿರುತ್ತೇನೆ. ಚಾಸಾ 4 ಬೀಡಿ ಗ್ರಾಮ ಬಸನಿಲ್ದಾಣದಲ್ಲಿ ರೇಡಿಯಂ ಕಟಿಂಗ ಅಂಗಡಿ ಹಾಕಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1

ರವರು ಗೋಲಿಹಳ್ಳಿ ಗ್ರಾಮದ ನೋಬೆಲ್ ಸೆಂಟ್ರಲ ಇಂಗ್ಲೀಷ ಮಾಧ್ಯಮ ಶಾಲೆಯಲ್ಲಿ ಕೆಲಸ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ಆರೋಪಿತನಿಗೂ ಹಾಗೂ ಚಾಸಾ 4 ಇವರಿಗೂ ಮನಸಾ ಮನಸಾ ಸರಿ ಇದ್ದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಚಾಸಾ 4 ಇವರು ಟಿವಿ ಯಲ್ಲಿ ಸೌಂಡ ಇಟ್ಟರೆ ಅದಕ್ಕೆ ಆರೋಪಿತನು ತಕರಾರು ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಓಣಿಯಲ್ಲಿ ಮಕ್ಕಳು ಆಟವಾಡಿದರೂ ಸಹಿತ ಅದಕ್ಕೆ ಆರೋಪಿತನು ತಕರಾರು ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ದಿಃ 30.08.2018 ರಂದು ಸಾಯಂಕಾಲ 7.30 ಗಂಟೆ ಸುಮಾರಿಗೆ ನಾನು ಬೀಡಿ ಗ್ರಾಮದ ಬಜಾರ ಪೇಟೆ ಓಣಿಯಲ್ಲಿ ಚಾಸಾ 4 ರವರ ಹತ್ತಿರ ಪಿಗ್ಮಿ ಕಲೆಕ್ಟ ಮಾಡುತ್ತಿದ್ದಾಗ ಆರೋಪಿತನು ಚಾಸಾ 4 ರವರ ಮನೆಗೆ ಹೊಕ್ಕು ಚಾಸಾ 1 ರವರಿಗೂ ಏ ರಂಡಿ, ನಿನ್ನ ಹುಡುಗನಿಗೆ ಬುದ್ಧಿ ಹೇಳು, ನನ್ನ ಮಾವನ ಮಕ್ಕಳೊಂದಿಗೆ ತಂಟೆ ಮಾಡಿ ಬಂದಿರುತ್ತಾನೆ, ನೀನು ಓಣಿಯಲ್ಲಿ ಎಷ್ಟು ಮೆರಿತಿ ಗೊತ್ತೈತಿ ಎಂದು ಒದರಾಡಹತ್ತಿದನು. ಆಗ ಚಾಸಾ 1 ರವರು ಆರೋಪಿತನಿಗೆ ಸರಿಯಾಗಿ ಮಾತನಾಡು ಎಂದು ಹೇಳಿದಾಗ ಆರೋಪಿತನು ಚಾಸಾ 1 ರವರ ಕೈ ಹಿಡಿದು ಎಳೆದಾಡಿ ಅವಮಾನಪಡಿಸಿದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 4 ರವರು ಬಿಡಿಸಿಕೊಳ್ಳಲು ಬಂದಾಗ ಆರೋಪಿತನು ಚಾಸಾ 4 ರವರ ಕುತ್ತಿಗೆಗೆ ಕೈ ಹಾಕಿ ಎಳೆದಾಡಿ ಕೆಡವಿ ಅವನಿಗೆ ಕುತ್ತಿಗೆ ಮೇಲೆಲ್ಲ ಉಗುರಿನಿಂದ ಚೂರಿದನು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು, ಚಾಸಾ 5, 7 ಹಾಗೂ 8 ರವರು ತಂಟೆ ಬಿಡಿಸಿದೆವು ಎಂದರೆ ಸರಿಯಲ್ಲ. ನಿ ಪಿ 1 ರಂತೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಖಾನಾಪೂರ